# ರಾಜ್ಯ ಒಕ್ಕಲಿಗರ ಸಂಘ

## ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು.

## ಕರಡು ನಿಯಮಾವಳಿ

1. **ಶೀರ್ಷಿಕೆ ಮತ್ತು ಪ್ರಾರಂಭ:**

(i) ಈ ನಿಯಮಾವಳಿಗಳನ್ನು ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2019 ಎಂದು ಕರೆಯತಕ್ಕದ್ದು.

(ii) ಈ ನಿಯಮಾವಳಿಗಳು ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ನೋಟೀಸ್ ಬೋರ್ಡಿನಲ್ಲಿ ಹಾಗೂ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು(ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ಅನ್ವಯಿಕೆ:**

(1) ಈ ನಿಯಮಾವಳಿಗಳು ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡು ವೇತನಾನುದಾನ ಪಡೆಯುತ್ತಿರುವ ಖಾಯಂ ನೌಕರರಿಗೆ ಮಾತ್ರ ಅನ್ವಯವಾಗುವುದು.

(2) ಈ ನಿಯಮಾವಳಿಗಳು ತಾತ್ಕಾಲಿಕವಾಗಿ ನೇಮಕಗೊಂಡ ನೌಕರರಿಗೆ ಅನ್ವಯಿಸುವುದಿಲ್ಲ.

3. **ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ:**

(i) ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಯ ವಿವಿಧ ಹುದ್ದೆಗಳು ಅನುಬಂಧಿಸಿದ ಷೆಡ್ಯೂಲ್-I ರ ಅಂಕಣ-2 ರಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು. ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಅನುಕ್ರಮವಾಗಿ ಅಂಕಣ-3, 4 ಮತ್ತು 5 ರಲ್ಲಿರುವಂತೆ ಇರತಕ್ಕದ್ದು. ಷೆಡ್ಯೂಲ್-I ರಲ್ಲಿ ವಿವರಿಸಿದ ಹುದ್ದೆಗಳು ಈ ಸಂಸ್ಥೆಯ ಮಂಜೂರಾದ ವೃಂದಬಲ ಆಗಿರುತ್ತದೆ.

(ii) ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಯ ನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿ ಹಾಗೂ ನಿವೃತ್ತಿ ವಯಸ್ಸು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಸಂಬಂಧಪಟ್ಟ ವರ್ಗದ ಸಿಬ್ಬಂದಿಗೆ ಅನುಗುಣವಾಗಿ ನಿಗದಿಪಡಿಸಿರುವಂತೆ ಅನ್ವಯವಾಗತಕ್ಕದ್ದು.

4. **ಪರಿಭಾಷೆ:**

ಈ ನಿಯಮಾವಳಿಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

1) "ಕಾಯಿದೆ" ಎಂದರೆ ಕರ್ನಾಟಕ ಶಿಕ್ಷಣ ಕಾಯಿದೆ 1983 (ಕರ್ನಾಟಕ ಆಕ್ಟ್ 1 ಆಫ್ 1995).

2) "ಅನುದಾನಿತ ಸಂಸ್ಥೆ" ಎಂದರೆ ಕರ್ನಾಟಕ ಸರ್ಕಾರದಿಂದ ಅಂಗೀಕೃತವಾಗಿದ್ದು ಭಾಗಶಃ ಅಥವಾ ಪೂರ್ಣ ಅನುದಾನ ಪಡೆಯುತ್ತಿರುವ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು, ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆ ಆಗಿರುತ್ತದೆ.

3) "ಮ್ಯಾನೇಜ್‌ಮೆಂಟ್" ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.

4) "ಸಂಘ" ಎಂದರೆ ರಾಜ್ಯ ಒಕ್ಕಲಿಗರ ಸಂಘ.

5) ''ಆಡಳಿತಾಧಿಕಾರಿ'' ಎಂದರೆ ರಾಜ್ಯ ಸರ್ಕಾರವು ರಾಜ್ಯ ಒಕ್ಕಲಿಗರ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರನ್ವಯ ನೇಮಿಸಿದ ಅಧಿಕಾರಿ ಆಗಿರುತ್ತಾರೆ.

6) 'ಸಿ.ಇ.ಒ.' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ.

7) ''ವರ್ಷ'' ಎಂದರೆ ಸಂದರ್ಭವು ಅಗತ್ಯಪಡಿಸಿದಂತೆ ಶೈಕ್ಷಣಿಕ ವರ್ಷ ಅಥವಾ ಆರ್ಥಿಕ ವರ್ಷ ಆಗಿರುತ್ತದೆ.

8) ''ಬೋಧಕ ಮತ್ತು ಬೋಧಕೇತರ ವೃಂದಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರ'' ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.

9) ''ಖಾಯಂ ಸಿಬ್ಬಂದಿ'' ಎಂದರೆ ಮಂಜೂರಾದ/ ಅಸ್ತಿತ್ವದಲ್ಲಿರುವ (substantive) ಬೋಧಕ ಅಥವಾ ಇತರೆ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ಕ್ರಮಬದ್ಧವಾಗಿ ನೇಮಕಗೊಂಡಿರುವ ಹಾಗೂ ನೇಮಕಾತಿಯು ವೇತನಾನುದಾನ ಪಡೆಯುವ ಹುದ್ದೆ/ಹುದ್ದೆಗಳೆಂದು ಕಾಲೇಜು ಶಿಕ್ಷಣ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿರುವ ಸಿಬ್ಬಂದಿ ಆಗಿರುತ್ತಾರೆ.

10) ''ತಾತ್ಕಾಲಿಕ ಸಿಬ್ಬಂದಿ'' ಎಂದರೆ ಮಂಜೂರಾದ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ನೇಮಕಗೊಳ್ಳದೇ ತುರ್ತು ಅವಶ್ಯಕತೆಗನುಗುಣವಾಗಿ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು(ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಗೆ ತಾತ್ಕಾಲಿಕವಾಗಿ ನೇಮಕಗೊಂಡ ಸಿಬ್ಬಂದಿಯಾಗಿರುತ್ತಾರೆ.

11) ''ಬ್ಯಾಂಕ್'' ಎಂದರೆ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ರಾಜ್ಯ ಒಕ್ಕಲಿಗರ ಸಂಘ ಇವರು ನಿಗದಿಪಡಿಸಿರುವ ಯಾವುದೇ ವಾಣಿಜ್ಯ/ ಸಹಕಾರಿ ಬ್ಯಾಂಕ್ ಆಗಿರುತ್ತದೆ.

12) ''ಇಲಾಖಾ ಮುಖ್ಯಸ್ಥರು'' ಎಂದರೆ (1) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ
(2) ನಿರ್ದೇಶಕರು,ಕಾಲೇಜು ಶಿಕ್ಷಣ ಇಲಾಖೆ.

13) '' ನಿಯಂತ್ರಣ ಪ್ರಾಧಿಕಾರ'' ಎಂದರೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ.

14) ''ಸಕ್ಷಮ ಪ್ರಾಧಿಕಾರ'' ಎಂದರೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ.

15) ''ಸಂಸ್ಥೆಯಲ್ಲಿನ ಹುದ್ದೆ/ಹುದ್ದೆಗಳು'' ಎಂದರೆ ವಿಶ್ವೇಶ್ವರಪುರ ವಿಜ್ಞಾನ ಕಾಲೇಜು (ಅನುದಾನಿತ), ಬೆಂಗಳೂರು ಸಂಸ್ಥೆಗೆ ಈ ನಿಯಮಾವಳಿಯ ಷೆಡ್ಯೂಲ್-1 ರಲ್ಲಿ ನಿರ್ಧಿಷ್ಠಪಡಿಸಿದ ಹುದ್ದೆಗಳು.

16) ''ಆಯ್ಕೆ ಮಂಡಳಿ'' (Board of Selection) ಎಂದರೆ ಈ ನಿಯಮಾವಳಿಗಳಲ್ಲಿ ವಿವಿಧ ವರ್ಗದ ಹುದ್ದೆಗಳಿಗೆ ನಿಗದಿಪಡಿಸಿದ ಆಯ್ಕೆ ಮಂಡಳಿಗಳು.

17) 'ರಾಜ್ಯ' ಎಂದರೆ ಕರ್ನಾಟಕ ರಾಜ್ಯ.

ಈ ನಿಯಮಾವಳಿಗಳಲ್ಲಿ ನಿರ್ಧಿಷ್ಠವಾಗಿ ವ್ಯಾಖ್ಯಾನಿಸದಿರುವ ಇತರೆ ಪರಿಭಾಷೆಗಳು ಕರ್ನಾಟಕ ಶಿಕ್ಷಣ ಕಾಯಿದೆ 1983, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003 ರಲ್ಲಿನ ಮಾರ್ಗಸೂಚಿಗಳಂತೆ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗ/ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಹಾಗೂ ಅವುಗಳನ್ನು ವಿಶ್ವೇಶ್ವರಪುರ ವಿಜ್ಞಾನ ಕಾಲೇಜು(ಅನುದಾನಿತ) ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. ಸಿಬ್ಬಂದಿ ನೇಮಕಾತಿ:**

(i) ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಹಾಗೂ ನೇಮಕಾತಿಯ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ಹಾಗೂ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆ ಪಡೆದು ನೇಮಿಸಿಕೊಳ್ಳತಕ್ಕದ್ದು. ಷೆಡ್ಯೂಲ್-1 ರಲ್ಲಿ ನಮೂದಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

(ii) ಮಂಜೂರಾದ/ಹೆಚ್ಚುವರಿಯಾಗಿ/ಹೊಸದಾಗಿ ಸೃಜಿಸಿದ ಹುದ್ದೆಗಳಿಗೆ ಇನ್ನು ಮುಂದೆ ಮಾಡಲಾಗುವ ಯಾವುದೇ ಹೊಸ ನೇಮಕಾತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವೇತನಾನುದಾನ (Grant-in-aid) ಇರುವ ಹುದ್ದೆ/ಹುದ್ದೆಗಳನ್ನು ಮಾತ್ರ ತುಂಬತಕ್ಕದ್ದು.

(iii) ಮ್ಯಾನೇಜ್‌ಮೆಂಟ್‌ನವರು ಈ ಸಂಸ್ಥೆಯಲ್ಲಿನ ಅನುದಾನ ರಹಿತ ಪದವಿ ಕೋರ್ಸುಗಳಾದ ಬಿ.ಎಸ್‌ಸಿ.(ಪಿ.ಎಂ.ಸಿ.ಎಸ್.) (ಸಿ.ಝಡ್.ಎಂ.) (ಸಿ.ಬಿ.ಬಿ.ಟಿ.) ಮತ್ತು ಬಿ.ಸಿ.ಎ. ಪದವಿ ಕೋರ್ಸಿಗೆ ಹಾಗೂ ಅನುದಾನ ರಹಿತ ಸ್ನಾತಕೋತ್ತರ ಎಂ.ಎಸ್‌ಸಿ.(ಬಯೋಟೆಕ್ನಾಲಜಿ), ಎಂ.ಎಸ್‌ಸಿ.(ಕೆಮಿಸ್ಟ್ರಿ –ಆರ್ಗ್ಯಾನಿಕ್/ಇನ್–ಆರ್ಗ್ಯಾನಿಕ್) ಕೋರ್ಸುಗಳಿಗೆ ಆದಷ್ಟು ಶೀಘ್ರವಾಗಿ ಸರ್ಕಾರದ ಸಹಾಯಾನುದಾನಕ್ಕೆ ಒಳಪಡಿಸಲು ಕ್ರಮವಹಿಸುವುದು. ಈ ಕೋರ್ಸುಗಳು ಸಹಾಯಾನುದಾನಕ್ಕೆ (Grant-in-aid) ಒಳಪಟ್ಟ ನಂತರ ಮುಂದಿನ ಎಲ್ಲಾ ನೇಮಕಾತಿಗಳನ್ನು ವೇತನಾನುದಾನ ಪಡೆಯುವ ಹುದ್ದೆಗಳಿಂದು ಮಾತ್ರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ತುಂಬತಕ್ಕದ್ದು.

**6. ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:**

(1) ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಕಾಲೇಜು ಶಿಕ್ಷಣ) ನಿಯಮಗಳು, 2003 ರಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮ್ಯಾನೇಜ್‌ಮೆಂಟ್‌ಗಳಿಗೆ ಸಿಬ್ಬಂದಿ ನೇಮಕಾತಿಗೆ ಹಾಗೂ ಇತರೇ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದೇ ರೀತಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯು.ಜಿ.ಸಿ.) ಪದವಿ ಕೋರ್ಸುಗಳ ಕಾಲೇಜುಗಳಲ್ಲಿ ಇರಬೇಕಾದ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಿದೆ. ಈ ನಿಯಮಗಳು ವಿಶ್ವೇಶ್ವರಪುರ ವಿಜ್ಞಾನ ಕಾಲೇಜಿಗೆ(ಅನುದಾನಿತ) ಅನ್ವಯವಾಗುತ್ತದೆ. ಅಲ್ಲದೆ, ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗೆ ಅನುಗುಣವಾಗಿ ಬೋಧಕೇತರ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಿದೆ. ಈ ನಿಯಮಗಳು ಸಹ ವಿಶ್ವೇಶ್ವರಪುರ ಕಾನೂನು ಕಾಲೇಜಿಗೆ (ಅನುದಾನಿತ) ಅನ್ವಯವಾಗುತ್ತದೆ.

(2) ವಿಶ್ವೇಶ್ವರಪುರ ವಿಜ್ಞಾನ ಕಾಲೇಜಿನಲ್ಲಿ ಅನುದಾನಿತ ವಿಭಾಗದಲ್ಲಿ ಪದವಿ ಕೋರ್ಸುಗಳಾದ ಬಿ.ಎಸ್‌ಸಿ. (ಪಿ.ಸಿ.ಎಂ.), (ಸಿ.ಬಿ.ಝಡ್.) ಮತ್ತು (ಸಿ.ಬಿ.ಎಸ್) ವಿಷಯ ಸಂಯೋಜನೆಯೊಂದಿಗೆ ನಡೆಸಲಾಗುತ್ತಿದೆ. ಇದಲ್ಲದೆ, ಅನುದಾನ ರಹಿತ ವಿಭಾಗದಲ್ಲಿ ಪದವಿ ಕೋರ್ಸುಗಳಾದ ಬಿ.ಎಸ್‌ಸಿ.(ಪಿ.ಎಂ.ಸಿ.ಎಸ್.), (ಸಿ.ಝಡ್.ಎಂ.) (ಸಿ.ಬಿ.ಬಿ.ಟಿ.) ವಿಷಯ ಸಂಯೋಜನೆಯೊಂದಿಗೆ ನಡೆಸಲಾಗುತ್ತಿದೆ. ಬಿ.ಸಿ.ಎ. ಪದವಿ ಕೋರ್ಸ್ ಸಹ ಅನುದಾನ ರಹಿತವಾಗಿದೆ. ಸ್ನಾತಕೋತ್ತರ ವಿಭಾಗದಲ್ಲಿ ಅನುದಾನ ರಹಿತವಾಗಿ ಎಂ.ಎಸ್.ಸಿ.(ಬಯೋಟೆಕ್ನಾಲಜಿ), ಮತ್ತು ಎಂಎಸ್.ಸಿ.(ಕೆಮಿಸ್ಟ್ರಿ –ಆರ್ಗ್ಯಾನಿಕ್/ಇನ್–ಆರ್ಗ್ಯಾನಿಕ್) ಕೋರ್ಸುಗಳನ್ನು ಸಹ ನಡೆಸಲಾಗುತ್ತಿದೆ. ಈ ಸಂಸ್ಥೆಯಲ್ಲಿನ ಕೋರ್ಸುಗಳಲ್ಲಿ ಇರುವ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಹಾಗೂ ವಿಭಾಗಗಳ ಸಂಖ್ಯೆಗೆ ಅನುಗುಣವಾಗಿ ಕಾರ್ಯಭಾರವನ್ನು ಪರಿಗಣಿಸಿ ಬೋಧಕ ಸಿಬ್ಬಂದಿಯನ್ನು ನಿಗದಿಪಡಿಸಲಾಗಿದೆ. ಇದೇ ರೀತಿ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾದರಿಯನ್ನು ಅನುಸರಿಸಿ ಕಾಲೇಜಿನಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಶ್ವೇಶ್ವರಪುರ ವಿಜ್ಞಾನ ಕಾಲೇಜಿಗೆ ಬೋಧಕೇತರ ಸಿಬ್ಬಂದಿಯನ್ನು ನಿಗದಿಪಡಿಸಲಾಗಿದೆ.

(3) ಷೆಡ್ಯೂಲ್–1 ರಲ್ಲಿ ನಮೂದಿಸಿದ ಹುದ್ದೆಗಳು ಈ ಸಂಸ್ಥೆಯ ಮಂಜೂರಾದ ವೃಂದಬಲ ಆಗಿರುತ್ತದೆ. ಮಂಜೂರಾದ ವೃಂದಗಳಲ್ಲಿ ಯಾವುದೇ ಹೆಚ್ಚುವರಿ ಹುದ್ದೆಯನ್ನು ಸೃಜಿಸುವುದು ಮತ್ತು/ಅಥವಾ ಷೆಡ್ಯೂಲ್–1ರಲ್ಲಿ ಸೇರಿಲ್ಲದ ಯಾವುದೇ ಹೊಸ ಹುದ್ದೆಯನ್ನು ಸೃಜಿಸುವುದು ಕಡ್ಡಾಯವಾಗಿ ನಿಗದಿತ ಮಾನದಂಡಗಳಿಗೆ ಬದ್ಧವಾಗಿ ಅಂದರೆ ಸಂಸ್ಥೆಯಲ್ಲಿನ ಯಾವುದೇ ಶೈಕ್ಷಣಿಕ ಕೋರ್ಸಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಮತ್ತು ವಿಭಾಗಗಳ ಸಂಖ್ಯೆಗೆ ಅನುಗುಣವಾಗಿರತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಸೃಜಿಸತಕ್ಕದ್ದು. ಇದೇ ರೀತಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವು ನಿಗದಿಪಡಿಸಿರುವ ಮಾರ್ಗಸೂಚಿಗಳ ಪ್ರಕಾರ ಪ್ರೊಫೆಸರ್ ಮತ್ತು ಅಸೋಸಿಯೇಟ್ ಪ್ರೋಫೆಸರ್ ಹುದ್ದೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವೇತನಾನುದಾನ ಪಡೆಯುವ ಹುದ್ದೆಗಳೆಂದು ಮಾತ್ರ ಭರ್ತಿಮಾಡತಕ್ಕದ್ದು.

**7. <u>ಕಾರ್ಯಭಾರ:</u>**

(ಅ) ಪೂರ್ಣಕಾಲಿಕ ಬೋಧಕ ಸಿಬ್ಬಂದಿಗೆ ಒಂದು ಶೈಕ್ಷಣಿಕ ವರ್ಷದಲ್ಲಿ 30 ಕಾರ್ಯನಿರತ ವಾರಗಳಲ್ಲಿ ಪ್ರತಿ ವಾರದಲ್ಲಿ 40 ಗಂಟೆಗಳಿಗೆ ಕಡಿಮೆಯಿಲ್ಲದಂತೆ ಕಾರ್ಯಭಾರ ಇರತಕ್ಕದ್ದು.

(ಅ) ಬೋಧಕ ಸಿಬ್ಬಂದಿಯು ಕಾಲೇಜಿನ ಕೆಲಸದ ಅವಧಿಯಲ್ಲಿ ಪ್ರತಿ ದಿನ ಕನಿಷ್ಠ 7 ಗಂಟೆಗಳ ಅವಧಿಗೆ ಕಾಲೇಜಿನಲ್ಲಿ ಹಾಜರಿರತಕ್ಕದ್ದು. ಬೋಧಕ ಸಿಬ್ಬಂದಿಯು ಪ್ರತಿದಿನ 2 ಗಂಟೆಗಳ ಅವಧಿಗೆ ವಿದ್ಯಾರ್ಥಿಗಳನ್ನು ಸಮುದಾಯ ಅಭಿವೃದ್ಧಿ ಕಾರ್ಯಕ್ರಮ/ ಪಠ್ಯೇತರ ಚಟುವಟಿಕೆಗಳು/ ಗ್ರಂಥಾಲಯ ಸಮಾಲೋಚನೆ/ಸಂಶೋಧನೆ ಮತ್ತು ಇತ್ಯಾದಿ ವಿಷಯಗಳಲ್ಲಿ ತೊಡಗಿಸಲು ವಿನಿಯೋಗಿಸತಕ್ಕದ್ದು.

(ಆ) ಬೋಧಕ ಸಿಬ್ಬಂದಿಗೆ ಬೋಧನಾ ಅವಧಿಯು ಈ ಕೆಳಕಂಡಂತೆ ಇರತಕ್ಕದ್ದು.

| ಬೋಧಕ ಸಿಬ್ಬಂದಿ | ಬೋಧನಾ ಅವಧಿ –ಗಂಟೆಗಳಲ್ಲಿ/ವಾರಕ್ಕೆ |
|---|---|
| ಪ್ರಾಂಶುಪಾಲರು | 6 |
| ಅಸೋಸಿಯೇಟ್ ಪ್ರೊಫೆಸರ್ | 20 (ಲ್ಯಾಬ್ ಒಳಗೊಂಡಂತೆ) |
| ಅಸಿಸ್ಟೆಂಟ್ ಪ್ರೊಫೆಸರ್ | 20 (ಲ್ಯಾಬ್ ಒಳಗೊಂಡಂತೆ) |

(ಇ) ಸಂಸ್ಥೆಯಲ್ಲಿ ಯಾವುದೇ ವಿಷಯ/ವಿಭಾಗದಲ್ಲಿನ ಕಾರ್ಯಭಾರವು ನಿಗದಿತ ಬೋಧನಾ ಅವಧಿ 20 ಗಂಟೆಗಳಿಗಿಂತ ಹೆಚ್ಚಾಗಿದ್ದು, ಆದರೆ ಪೂರ್ಣಕಾಲಿಕ ಹೆಚ್ಚುವರಿ ಬೋಧನಾ ಸಿಬ್ಬಂದಿ ನೇಮಕಕ್ಕೆ ಅಗತ್ಯಕ್ಕಿಂತ ಕಡಿಮೆ ಬಿದ್ದಲ್ಲಿ, ಅಂತಹ ಕಾರ್ಯಭಾರವನ್ನು ನಿರ್ವಹಿಸಲು ಯು.ಜಿ.ಸಿ. ಮಾರ್ಗಸೂಚಿಗಳಂತೆ ಸೂಕ್ತ ವಿದ್ಯಾರ್ಹತೆಯುಳ್ಳ ಅಂಶಕಾಲಿಕ ಬೋಧನಾ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳತಕ್ಕದ್ದು. ಇಂತಹ ತಾತ್ಕಾಲಿಕ ನೇಮಕಾತಿಗಳಿಗೆ ವೇತನಕ್ಕೆ ಸಂಬಂಧಿಸಿದ ವೆಚ್ಚವನ್ನು ಸಂಸ್ಥೆಯ ಮ್ಯಾನೇಜ್‌ಮೆಂಟ್ ಭರಿಸತಕ್ಕದ್ದು.

**8. <u>ನೇರ ನೇಮಕಾತಿ:</u>**

(1) ನೇಮಕಾತಿ ಪ್ರಾಧಿಕಾರವು ಯಾವುದೇ ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಕಂಡುಬಂದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಖಾಲಿ ಹುದ್ದೆಗಳ ವಿವರ, ಹುದ್ದೆಗಳ ಸಂಖ್ಯೆ, ಅರ್ಹತಾ ಷರತ್ತುಗಳು ಮತ್ತು ನೇಮಕಾತಿ ವಿಧಾನ ಇತ್ಯಾದಿಗಳನ್ನು ನಮೂದಿಸಿ ವೃತ್ತ ಪತ್ರಿಕೆ ಹಾಗೂ ಸೂಕ್ತವೆನಿಸುವ ಇತರೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಕ್ರಮಕೈಗೊಳ್ಳತಕ್ಕದ್ದು.

(2) ಷೆಡ್ಯೂಲ್ -1 ರಲ್ಲಿ ನಮೂದಿಸಿದ ಮಂಜೂರಾದ ವೃಂದಗಳಲ್ಲಿ ಅನುದಾನರಹಿತವಾದ ಯಾವುದೇ ಖಾಲಿ ಹುದ್ದೆಯನ್ನು ನೇಮಕಾತಿ ಪ್ರಾಧಿಕಾರವು ಭರ್ತಿಮಾಡುವ ಅವಶ್ಯಕತೆ ಕಂಡುಬಂದಲ್ಲಿ, ಈ ನಿಯಮಗಳಲ್ಲಿ ನಿಗದಿಪಡಿಸಿರುವ ಅರ್ಹತಾ ಷರತ್ತುಗಳು ಮತ್ತು ವಿದ್ಯಾರ್ಹತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು ಮತ್ತು ಆ ರೀತಿ ನೇಮಕಗೊಂಡ ಸಿಬ್ಬಂದಿಗೆ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಒಕ್ಕಲಿಗರ ಸಂಘದ ಸಂಪನ್ಮೂಲದಿಂದ ಭರಿಸತಕ್ಕದ್ದು.

(3) ಇದೇ ರೀತಿ ಸಂಸ್ಥೆಯಲ್ಲಿನ ಅನುದಾನ ರಹಿತ ಪದವಿ ಕೋರ್ಸುಗಳಾದ ಬಿ.ಎಸ್‌ಸಿ.(ಪಿ.ಎಂ.ಸಿ.ಎಸ್.), (ಸಿ.ಝುಡ್.ಎಂ.) (ಸಿ.ಬಿ.ಬಿ.ಟಿ.) ಮತ್ತು ಬಿ.ಸಿ.ಎ. ಕೋರ್ಸ್‌ಗಳು ಹಾಗೂ ಅನುದಾನ ರಹಿತ ಸ್ನಾತಕೋತ್ತರ ಕೋರ್ಸುಗಳಾದ ಎಂ.ಎಸ್.ಸಿ.(ಬಯೋಟೆಕ್ನಾಲಜಿ), ಮತ್ತು ಎಂಎಸ್.ಸಿ.(ಕೆಮಿಸ್ಟ್ರಿ-ಆರ್ಗ್ಯಾನಿಕ್/ಇನ್-ಆರ್ಗ್ಯಾನಿಕ್) ಕೋರ್ಸುಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳನ್ನು ಸಹ ಮ್ಯಾನೇಜ್‌ಮೆಂಟ್ ರವರು ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.

9. <u>ಆಯ್ಕೆ ಮಂಡಳಿ:</u>

ನೇಮಕಾತಿ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡ ಆಯ್ಕೆ ಮಂಡಳಿಗಳನ್ನು ನಿಗದಿಪಡಿಸಲಾಗಿದೆ.

**(ಅ) ಬೋಧಕ ಸಿಬ್ಬಂದಿಗೆ ಆಯ್ಕೆ ಮಂಡಳಿ:**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ನಾಮನಿರ್ದೇಶಿಸಲ್ಪಟ್ಟ ಸರ್ಕಾರಿ ಪದವಿ ಕಾಲೇಜಿನ ವಿಷಯ ಪರಿಣಿತರಾದ ಪ್ರೊಫೆಸರ್. | ಸದಸ್ಯರು |
| (ಇ) | ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ನಾಮನಿರ್ದೇಶಿಸಲ್ಪಟ್ಟ ರಾಜ್ಯದ ಯಾವುದೇ ಖಾಸಗಿ ಪದವಿ ಕಾಲೇಜಿನ ವಿಷಯ ಪರಿಣಿತರಾದ ಪ್ರೊಫೆಸರ್ | ಸದಸ್ಯರು |
| (ಈ) | ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಇಲಾಖೆಗಳ ಪ್ರತಿನಿಧಿಗಳು | ಸದಸ್ಯರುಗಳು |
| (ಉ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಊ) | ಪ್ರಿನ್ಸಿಪಾಲ್, ವಿಶ್ವೇಶ್ವರಪುರ ಕಾನೂನು ಕಾಲೇಜು, ಬೆಂಗಳೂರು. | ಸದಸ್ಯ-ಕಾರ್ಯದರ್ಶಿ |

**<u>ಕೋರಂ:</u>** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 4 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ ಒಬ್ಬರು (ಈ) ಹಾಗೂ ಮತ್ತೊಬ್ಬ ಸದಸ್ಯರು (ಆ) ಅಥವಾ (ಇ) ಆಗಿರತಕ್ಕದ್ದು.

(ಅ) ಬೋಧಕೇತರ ಹಾಗೂ ಇತರೆ ಸಿಬ್ಬಂದಿಗೆ ಆಯ್ಕೆ ಮಂಡಳಿ:

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ನಾಮನಿರ್ದೇಶಿಸಲ್ಪಟ್ಟ ಉಪನಿರ್ದೇಶಕರು ಹಾಗೂ ಮೇಲಿನ ದರ್ಜೆಯ ಅಧಿಕಾರಿ. | ಸದಸ್ಯರು |
| (ಇ) | ಆಡಳಿತ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಕೇಂದ್ರ ಸರ್ಕಾರದ/ ರಾಜ್ಯ ಸರ್ಕಾರದ ಗ್ರೂಪ್-ಎ ವೃಂದದ ನಿವೃತ್ತ ಅಧಿಕಾರಿ | ಸದಸ್ಯರು |
| (ಈ) | ಸಹಕಾರ ಸಂಘಗಳ ನಿಬಂಧಕರಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿ | ಸದಸ್ಯರು |
| (ಉ) | ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಇಲಾಖೆಗಳ ಪ್ರತಿನಿಧಿಗಳು | ಸದಸ್ಯರುಗಳು |
| (ಊ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಋ) | ಪ್ರಿನ್ಸಿಪಾಲ್, ವಿಶ್ವೇಶ್ವರಪುರ ವಿಜ್ಞಾನ ಕಾಲೇಜು, ಬೆಂಗಳೂರು. | ಸದಸ್ಯರು |
| (ಎ) | ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ. | ಸಂಚಾಲಕರು |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 5 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ (ಉ) ರಲ್ಲಿನ ಒಬ್ಬ ಸದಸ್ಯರು ಮತ್ತು ಇಬ್ಬರು ಸದಸ್ಯರು (ಆ) ಮತ್ತು ಅಥವಾ (ಇ) ಮತ್ತು/ಅಥವಾ (ಈ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

10. **ಅರ್ಹ ಅಭ್ಯರ್ಥಿಗಳ ಆಯ್ಕೆ:**

(i) ಆಯ್ಕೆ ಮಂಡಳಿಯು ನಿಗದಿಪಡಿಸಿದ ಆಯ್ಕೆ ವಿಧಾನವನ್ನು ಅಳವಡಿಸಿಕೊಂಡು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

(ii) ಆಯ್ಕೆ ವಿಧಾನವು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆಗೊಳ್ಳುವಂತೆ ಇರತಕ್ಕದ್ದು ಮತ್ತು ಬೋಧನಾ ಸಿಬ್ಬಂದಿ ಆಯ್ಕೆಗೆ **ಷೆಡ್ಯೂಲ್-II** ರಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಒಳಗೊಂಡಿರತಕ್ಕದ್ದು.

iii) ಬೋಧಕೇತರ ಸಿಬ್ಬಂದಿ ಮತ್ತು ಇತರೇ ಎಲ್ಲಾ ಹುದ್ದೆಗಳ ಆಯ್ಕೆಗೆ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ರಾಜ್ಯ ಸರ್ಕಾರ ಸಂಬಂಧಪಟ್ಟ ನಿಯಮಗಳಲ್ಲಿ/ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಆಯ್ಕೆವಿಧಾನವನ್ನು ಅನುಸರಿಸತಕ್ಕದ್ದು.

11. **ಅಭ್ಯರ್ಥಿಗಳ ನೇಮಕಾತಿ:**

(i) ಆಯ್ಕೆ ಮಂಡಳಿಯು ಕಳುಹಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಾಗೂ ಸಂಬಂಧಪಟ್ಟ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಎಲ್ಲಾ ಅಭ್ಯರ್ಥಿಗಳಿಗೆ ಅವಶ್ಯವಿರುವ ವೈದ್ಯಕೀಯ ತಪಾಸಣೆ ಮತ್ತು ಶೈಕ್ಷಣಿಕ ದಾಖಲೆಗಳ ಪರಿಶೀಲನೆ ನಂತರ ಕಾರ್ಯಕಾರಿ ಸಮಿತಿಯು ನೇಮಕಾತಿ ಮಾಡಿಕೊಳ್ಳತಕ್ಕದ್ದು.

(ii) ನೇಮಕಾತಿ ಆದೇಶ ಹೊರಡಿಸಿದ ನಂತರ ನೇಮಕಾತಿಗೊಂಡ ಅಭ್ಯರ್ಥಿಯು ನಿಗದಿತ ಕಾಲಾವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅವನ/ಅವಳ ನೇಮಕಾತಿಯು ರದ್ದುಗೊಳ್ಳುತ್ತದೆ. ಖಾಲಿಯಿರುವ ಹುದ್ದೆಗೆ ಮೆರಿಟ್‌ನಲ್ಲಿ ನಂತರದ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ನೇಮಿಸಿಕೊಳ್ಳತಕ್ಕದ್ದು. ಎರಡನೇ ಅಭ್ಯರ್ಥಿಯೂ ಸಹ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹ ಹುದ್ದೆಯನ್ನು ಖಾಲಿ ಹುದ್ದೆ ಎಂದು ಪರಿಗಣಿಸಿ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು.

12. **ಪರಿವೀಕ್ಷಣಾ ಅವಧಿ:**

(i) ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು(ಅನುದಾನಿತ), ಕೆ.ಆರ್.ರಸ್ತೆ, ಬೆಂಗಳೂರು ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡ ಎಲ್ಲಾ ಸಿಬ್ಬಂದಿಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಇರುತ್ತದೆ.

(ii) ನೇಮಕಾತಿ ಪ್ರಾಧಿಕಾರವು ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ ಪರಿವೀಕ್ಷಣಾ ಅವಧಿಯನ್ನು ಅವಶ್ಯಕವೆನಿಸಿದ ಅವಧಿಯವರೆಗೆ ವಿಸ್ತರಿಸಬಹುದು.

(iii) ಎರಡು ವರ್ಷಗಳ ಅಥವಾ ವಿಸ್ತರಿಸಿದ ಪರಿವೀಕ್ಷಣಾ ಅವಧಿಯು ಮುಕ್ತಾಯಗೊಂಡ ನಂತರ, ಪರೀಕ್ಷಾರ್ಥಿ ಅಭ್ಯರ್ಥಿಯ ಕಾರ್ಯನಿರ್ವಹಣೆ ಆಧರಿಸಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆ ಎಂದು ಘೋಷಿಸತಕ್ಕದ್ದು. ಬೋಧನಾ ಸಿಬ್ಬಂದಿಗೆ ಪಿ.ಬಿ.ಐ.ಎಸ್. ಮೌಲ್ಯಮಾಪನ ಪದ್ಧತಿ ಅನುಸರಿಸಿ ಪರಿವೀಕ್ಷಣಾ ಅವಧಿ ಘೋಷಿಸತಕ್ಕದ್ದು.

(iv) ಅತೃಪ್ತಿಕರ ಕಾರ್ಯನಿರ್ವಹಣೆ ಅಥವಾ ದುರ್ನಡತೆಗಾಗಿ ಯಾವ ಅಭ್ಯರ್ಥಿಯ ಪರಿವೀಕ್ಷಣಾ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆಂದು ಘೋಷಿಸಲ್ಪಡುವುದಿಲ್ಲವೋ ಅಂತಹವರನ್ನು ಯಾವುದೇ ಪೂರ್ವಭಾವಿ ನೋಟೀಸ್ ನೀಡದೆ ಸೇವೆಯಿಂದ ವಜಾಗೊಳಿಸಬಹುದಾಗಿದೆ.

13. **ಮುಂಬಡ್ತಿ:**

ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಮಂಜೂರಾದ ವೃಂದಬಲದಲ್ಲಿ ಬಡ್ತಿ ಕೋಟಾದಡಿ ಹುದ್ದೆ ಖಾಲಿ ಇದ್ದಾಗ ಮತ್ತು ಆ ಹುದ್ದೆಯನ್ನು ಭರ್ತಿ ಮಾಡುವುದು ಅವಶ್ಯಕವೆನಿಸಿದಾಗ ನೇಮಕಾತಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅರ್ಹ ನೌಕರರಿಗೆ ಬಡ್ತಿ ನೀಡುವುದನ್ನು ಪರಿಗಣಿಸತಕ್ಕದ್ದು.

14. **ಜೇಷ್ಠತೆ:**

(ಅ) ಸಂಸ್ಥೆಯ ಮ್ಯಾನೇಜ್‌ಮೆಂಟ್ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷವೂ ಜನವರಿ ಒಂದನೇ ದಿನಾಂಕದಲ್ಲಿರುವಂತೆ ಜೇಷ್ಠತಾ ಪಟ್ಟಿ ತಯಾರಿಸಿ ಪ್ರಕಟಪಡಿಸತಕ್ಕದ್ದು.

(ಆ) ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ಭಾಗ–VII ರಲ್ಲಿನ ನಿಯಮ 30 ರಂತೆ ಒಂದಕ್ಕಿಂತ ಹೆಚ್ಚು ಸಂಸ್ಥೆಗಳನ್ನು ನಡೆಸುತ್ತಿರುವ ಮ್ಯಾನೇಜ್‌ಮೆಂಟ್‌ಗಳು ಅಂತಹ ಸಂಸ್ಥೆಗಳಲ್ಲಿನ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಸಂಯುಕ್ತ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ನಿರ್ವಹಿಸತಕ್ಕದ್ದಾಗಿದೆ. ಈ ಪ್ರಕಾರ ರಾಜ್ಯ ಒಕ್ಕಲಿಗರ ಸಂಘವು ನಡೆಸುತ್ತಿರುವ ಮೂರು ಅನುದಾನಿತ ಶಿಕ್ಷಣ ಸಂಸ್ಥೆಗಳಾದ 1) ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, 2) ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಮತ್ತು 3) ವಿಶ್ವೇಶ್ವರಪುರ ವಿಜ್ಞಾನ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಜೇಷ್ಠತಾ ಪಟ್ಟಿಯನ್ನು (Combined Seniority List) ತಯಾರಿಸಿ ನಿರ್ವಹಿಸತಕ್ಕದ್ದು.

15. **ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ:** (Career Advancement Scheme).

(ಅ) ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಬೋಧಕ ಸಿಬ್ಬಂದಿಯು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯು.ಜಿ.ಸಿ.) ಮಾರ್ಗಸೂಚಿಗಳ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಂತೆ ಬಡ್ತಿ ಪಡೆಯಲು ಅರ್ಹರಿರುತ್ತಾರೆ.

(ಆ) ಪರಾಮರ್ಶೆ ಮತ್ತು ಮೌಲ್ಯಮಾಪನ ಸಮಿತಿಯು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯು.ಜಿ.ಸಿ.) ಮಾರ್ಗಸೂಚಿಗಳ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್/ ಅಸೋಸಿಯೇಟ್ ಪ್ರೊಫೆಸರ್ ಗಳಿಗೆ ಒಂದು ಶೈಕ್ಷಣಿಕ ವೇತನ ದರ್ಜೆಯಿಂದ (AGP) ಮತ್ತೊಂದು ಉನ್ನತ ಶೈಕ್ಷಣಿಕ ವೇತನ ದರ್ಜೆಗೆ ಬಡ್ತಿ ನೀಡಲು ಪರಿಗಣಿಸತಕ್ಕದ್ದು.

(ಇ) ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿ ಎಲ್ಲಾ ಅರ್ಹತೆಗಳನ್ನು ಪೂರೈಸುವ ಅಸಿಸ್ಟೆಂಟ್ ಪ್ರೊಫೆಸರ್/ ಅಸೋಸಿಯೇಟ್ ಪ್ರೊಫೆಸರ್‌ಗಳು ಯು.ಜಿ.ಸಿ. ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಣೆ ಆಧಾರಿತ ಗುಣಮಟ್ಟ ನಿಷ್ಕರ್ಷೆ ಪದ್ಧತಿಯಲ್ಲಿ (PBAS) ನಿಗದಿತ ನಮೂನೆಯಲ್ಲಿ ಎಲ್ಲಾ ಅರ್ಹತಾ ದಾಖಲಾತಿಗಳೊಂದಿಗೆ ನೇಮಕಾತಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(ಈ) ಅಂತಿಮ ಮೌಲ್ಯಮಾಪನದಲ್ಲಿ ಯಾವುದೇ ಬೋಧಕ ಸಿಬ್ಬಂದಿಯು ಯು.ಜಿ.ಸಿ. ಮಾರ್ಗಸೂಚಿಗಳನ್ನು ಪೂರೈಸದಿದ್ದಲ್ಲಿ, ಅಂತಹ ಸಿಬ್ಬಂದಿಯನ್ನು ಕನಿಷ್ಠ ಒಂದು ವರ್ಷದ ಅವಧಿಯ ನಂತರ ಮಾತ್ರ ಮರುಮೌಲ್ಯಮಾಪನ ಮಾಡತಕ್ಕದ್ದು.

(ಉ) ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿನ ಸೌಲಭ್ಯವು ಮಂಜೂರಾದ ಹಾಗೂ ಅಸ್ತಿತ್ವದಲ್ಲಿರುವ ಹುದ್ದೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಗೆ ವೈಯಕ್ತಿಕ ಬಡ್ತಿಯಾಗಿದ್ದು, ಆಯಾ ಹುದ್ದೆಯಲ್ಲಿ ಸ್ಥಾನಪನ್ನರಾಗಿರುವ ಬೋಧಕ ಸಿಬ್ಬಂದಿಯ ನಿವೃತ್ತಿ ನಂತರ ಸದರಿ ಹುದ್ದೆಗಳು ಪೂರ್ವಸ್ಥಿತಿಯಲ್ಲಿನ ಮೂಲ ವೃಂದದ ದರ್ಜೆಗೆ ಪುನರ್‌ಸ್ಥಾಪಿತಗೊಳ್ಳುತ್ತವೆ.

**16. <u>ಇತರೆ ನಿಯಮಗಳ ಅನ್ವಯಿಕೆ:</u>**

ಸಿಬ್ಬಂದಿ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1958 ಮತ್ತು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ 1978 (ಕರ್ನಾಟಕ ಆಕ್ಟ್ 14 ಆಫ್ 1990) ರ ಮೇರೆಗೆ ರಚಿಸಿರುವ ಇತರೆ ಎಲ್ಲಾ ನಿಯಮಗಳು ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ವೇತನಾನುದಾನ ಪಡೆಯುವ ಸಿಬ್ಬಂದಿಗೆ ಮಾತ್ರ ಅನ್ವಯವಾಗುತ್ತದೆ.

**17. <u>ವ್ಯಾಖ್ಯಾನ:</u>**

ಈ ನಿಯಮಾವಳಿಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ತೊಂದರೆ/ಗೊಂದಲ ಕಂಡುಬಂದಲ್ಲಿ, ಕಾರ್ಯಕಾರಿ ಸಮಿತಿಯು ಅಂತಹ ಉಪಬಂಧಗಳನ್ನು ಸಕ್ಷಮ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ವ್ಯಾಖ್ಯಾನಿಸತಕ್ಕದ್ದು ಮತ್ತು ಈ ಬಗ್ಗೆ ಸಕ್ಷಮ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಹೆಚ್.ನರಸಿಂಹಮೂರ್ತಿ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.